ಪರೀಕ್ಷೆ ನಡೆಸಿ ವಾರವಾದರೂ ಬರದ ವರದಿ • ನಿತ್ಯ ಸರಾಸರಿ ಎರಡು ಸಾವಿರ ಮಂದಿಗೆ ತಪಾಸಣೆ

# ‘ಜ್ವರ’ ಹೆಚ್ಚಿಸುವ ಚಿಕಿತ್ಸಾಲಯಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕೊರೊನಾ ಸೋಂಕಿತರನ್ನು ಬೇಗ ಪತ್ತೆ ಮಾಡುವ ಉದ್ದೇಶದಿಂದ ಜ್ವರ ಚಿಕಿತ್ಸಾಲಯಗಳನ್ನು ಪ್ರಾರಂಭಿಸಿ, ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ದಿನವೊಂದಕ್ಕೆ 10 ಸಾವಿರಕ್ಕೆ ಏರಿಕೆ ಮಾಡಲಾಗಿದೆ. ಆದರೆ, 24 ಗಂಟೆಗಳಲ್ಲಿ ವರದಿ ನೀಡಬೇಕಾದ ಪ್ರಯೋಗಾಲಯಗಳು ವಿಳಂಬ ಮಾಡುತ್ತಿರುವುದು ಸೋಂಕು ಶಂಕಿತರ ಆತಂಕಕ್ಕೆ ಕಾರಣವಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಜ್ವರ ಚಿಕಿತ್ಸಾಲಯಗಳಲ್ಲಿ ದಿನವೊಂದಕ್ಕೆ ಸರಾಸರಿ 2 ಸಾವಿರ ಮಂದಿಯನ್ನು ತಪಾಸಣೆ ಮಾಡಲಾಗುತ್ತಿದೆ. ಜ್ವರ, ಕೆಮ್ಮು ಸೇರಿದಂತೆ ವಿವಿಧ ಸೋಂಕಿನ ಲಕ್ಷಣಗಳು ಇದ್ದಲ್ಲಿ ವ್ಯಕ್ತಿಯ ಗಂಟಲ ದ್ರವ ಸಂಗ್ರಹಿಸಿ, ಪ್ರಯೋಗಾಲಯಗಳಿಗೆ ರವಾನಿಸಲಾಗುತ್ತದೆ. ಮಾದರಿಗಳನ್ನು ಪರೀಕ್ಷಿಸುವ ಪ್ರಯೋಗಾಲಯಗಳು ಐಸಿಎಂಆರ್ ಪೋರ್ಟಲ್‌ನಲ್ಲಿ ವಿವರವನ್ನು ನಮೂದಿಸಿ, ವರದಿಯನ್ನು ನಿಗದಿತ ಚಿಕಿತ್ಸಾಲಯಗಳಿಗೆ ಹಾಗೂ ವ್ಯಕ್ತಿಗೆ ಕಳುಹಿಸುತ್ತವೆ. ಸರ್ಕಾರದ ಆದೇಶದ ಪ್ರಕಾರ ಆರ್‌ಟಿಪಿಸಿಆರ್ ಪರೀಕ್ಷೆಯಾದಲ್ಲಿ ಈ ಪ್ರಕ್ರಿಯೆ 24 ಗಂಟೆಯಿಂದ 72 ಗಂಟೆಯೊಳಗೆ ಪೂರ್ಣಗೊಳ್ಳಬೇಕು. ಆದರೆ, ನಿಗದಿತ ಅವಧಿಯೊಳಗೆ ವರದಿ ಬಾರದ ಪರಿಣಾಮ ಪರೀಕ್ಷೆ ಮಾಡಿಸಿಕೊಂಡವರು ಹಲವರ ಸಂಪರ್ಕಕ್ಕೆ ಒಳಪಡುತ್ತಿದ್ದಾರೆ.

ಸರ್ಕಾರ ರೂಪಿಸಿರುವ ನಿಯಮದ ಪ್ರಕಾರ ಸಂಶಯಾಸ್ಪದವಾಗಿ ಮೃತಪಟ್ಟವರು, ಸೋಂಕಿತರೊಂದಿಗೆ ನೇರ ಹಾಗೂ ಪರೋಕ್ಷ ಸಂಪರ್ಕ ಹೊಂದಿರುವವರು ಸೇರಿದಂತೆ ‘ಎ’ ವರ್ಗದಲ್ಲಿ ಬರುವವರ ಮಾದರಿಯನ್ನು 12 ಗಂಟೆಗಳಲ್ಲಿ ಪರೀಕ್ಷೆ ನಡೆಸಬೇಕು. ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆಯಿಂದ (ಐಎಲ್‌ಐ) ಬಳಲುತ್ತಿರುವವರು ‘ಬಿ’ ವರ್ಗದಡಿ ಬರಲಿದ್ದು, ಅವರ ಮಾದರಿಗಳನ್ನು 24 ಗಂಟೆಗಳಲ್ಲಿ ಪರೀಕ್ಷೆ ನಡೆಸಬೇಕು. ಲಕ್ಷಣಗಳು ಗೋಚರಿಸದ ‘ಸಿ’ ವರ್ಗದವರ ಮಾದರಿಗಳನ್ನು 24ರಿಂದ 48 ಗಂಟೆಗಳೊಳಗೆ ಪರೀಕ್ಷೆ ಮಾಡಬೇಕು. ಆದರೆ, ಸದ್ಯ ಈ ನಿಯಮಗಳು ಪಾಲನೆಯಾಗುತ್ತಿಲ್ಲ.

**ಆ್ಯಂಟಿಜೆನ್ ಕಿಟ್ ಬಂದರೂ ವಿಳಂಬ:** ನಗರದಲ್ಲಿ ತ್ವರಿತವಾಗಿ ಸೋಂಕು ಪರೀಕ್ಷೆ ನಡೆಸಲು ಸರ್ಕಾರ ಆರಂಭದಲ್ಲಿ ಬಿಬಿಎಂಪಿಗೆ 50 ಸಾವಿರ ಆ್ಯಂಟಿಜೆನ್ ಕಿಟ್ ನೀಡಿತ್ತು. ಮತ್ತೆ ಈಗ 1 ಲಕ್ಷ ಕಿಟ್‌ಗಳನ್ನು ನೀಡಲಾಗಿದೆ. ಸದ್ಯ ನಗರದಲ್ಲಿ 7 ಸಾವಿರದಿಂದ 8 ಸಾವಿರ ಆ್ಯಂಟಿಜೆನ್ ಪರೀಕ್ಷೆ ನಡೆಸಲಾಗುತ್ತಿದೆ. ಈ ಪರೀಕ್ಷೆಗೆ ಒಳಗಾದವರಿಗೆ ಕೆಲವೇ ನಿಮಿಷಗಳಲ್ಲಿ ಫಲಿತಾಂಶ ತಿಳಿಯಲಿದೆ. ಇದರಿಂದಾಗಿ ಪ್ರಯೋಗಾಲಯಗಳ ಮೇಲಿನ ಹೊರೆ ಕಡಿಮೆ ಆಗಿದೆ. ಇಷ್ಟಾಗಿಯೂ ಆರ್‌ಟಿಪಿಸಿಆರ್ ಪರೀಕ್ಷೆಯ ಫಲಿತಾಂಶ ಮಾತ್ರ ನಿಗದಿತ ಸಮಯದೊಳಗೆ ಬರುತ್ತಿಲ್ಲ.

‘ಶಂಕಿತರ ಮಾದರಿಗಳನ್ನು ಸಂಗ್ರಹಿಸಿ, ಕಳುಹಿಸುವುದು ಮಾತ್ರ ನಮ್ಮ ಕೆಲಸ. ಸೋಂಕು ಶಂಕಿತರ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ವರದಿಗಳು ಸ್ವಲ್ಪ ವಿಳಂಬವಾಗುತ್ತಿರಬಹುದು. ವರದಿ ಬರುವವರೆಗೂ ಮನೆಯಲ್ಲಿಯೇ ಪ್ರತ್ಯೇಕವಾಗಿ ಇರಲು ಸೂಚಿಸುತ್ತಿದ್ದೇವೆ’ ಎಂದು ಜ್ವರ ಚಿಕಿತ್ಸಾಲಯದ ವೈದ್ಯರೊಬ್ಬರು ತಿಳಿಸಿದರು.

ಈ ಬಗ್ಗೆ ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ್ ಪ್ರಸಾದ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದಾಗ, ಅವರು ಕರೆ ಸ್ವೀಕರಿಸಲಿಲ್ಲ.

**ಜೈವಿಕ ಉದ್ಯಾನ; ಭಾನುವಾರ ಪ್ರವೇಶ ಮುಕ್ತ:** ಬನ್ನೇರುಘಟ್ಟ ಜೈವಿಕ ಉದ್ಯಾನವು ಮೊದಲಿನಂತೆ ಭಾನುವಾರ ಸಹ ವೀಕ್ಷಣೆಗೆ ಮುಕ್ತವಾಗಿದೆ. ಜುಲೈನಲ್ಲಿ ಪ್ರತಿ ಭಾನುವಾರ ಲಾಕ್‌ಡೌನ್ ಘೋಷಿಸಿದ್ದರಿಂದ, ಉದ್ಯಾನಕ್ಕೆ ಭಾನುವಾರ ರಜೆ ಘೋಷಿಸಲಾಗಿತ್ತು. ಮಂಗಳವಾರದಂದು ವೀಕ್ಷಕರ ವೀಕ್ಷಣೆಗೆ ತೆರೆಯಲಾಗಿತ್ತು.



ಜ್ವರ ಚಿಕಿತ್ಸಾಲಯದಲ್ಲಿ ವ್ಯಕ್ತಿಯನ್ನು ತಪಾಸಣೆ ಮಾಡುತ್ತಿರುವುದು

### ಅಂಕಿ-ಅಂಶಗಳು

**149** ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಜ್ವರ ಚಿಕಿತ್ಸಾಲಯಗಳು

**44,062** ಚಿಕಿತ್ಸಾಲಯಗಳಲ್ಲಿ ಈವರೆಗೆ ತಪಾಸಣೆ ಮಾಡಿಸಿಕೊಂಡವರು

**7,567** ಪ್ರತಿ 10 ಲಕ್ಷ ಮಂದಿಗೆ ನಡೆಸಲಾಗುತ್ತಿರುವ ಪರೀಕ್ಷೆಗಳು

### ಪರೀಕ್ಷೆಗೆ ಒಳಪಟ್ಟವರು ಏನು ಮಾಡಬೇಕು?

- ಪರೀಕ್ಷೆ ವರದಿ ಬರುವ ವರೆಗೂ ಮನೆಯಲ್ಲಿಯೇ ಪ್ರತ್ಯೇಕವಾಗಿ ಇರಬೇಕು
- ಕುಟುಂಬದ ಸದಸ್ಯರೊಂದಿಗೆ ಕಡ್ಡಾಯವಾಗಿ ಅಂತರ ಕಾಯ್ದುಕೊಳ್ಳಬೇಕು
- ಯಾವಾಗಲೂ ಮುಖಗವಸು ಧರಿಸಿರಬೇಕು
- ಕೋವಿಡ್ ಪರೀಕ್ಷೆಯ ಫಲಿತಾಂಶವನ್ನು ದೂರವಾಣಿ ಮೂಲಕ ಅಥವಾ ವೈಯಕ್ತಿಕವಾಗಿ ತಿಳಿಸಲಾಗುತ್ತದೆ
- ಕೋವಿಡ್ ಸೋಂಕು ದೃಢಪಟ್ಟಲ್ಲಿ ಬೇರೆ ಕಾಯಿಲೆಗಳಿಲ್ಲದ 50 ವರ್ಷದೊಳಗಿನವರು ಮನೆಯಲ್ಲಿಯೇ ಆರೈಕೆ ಮಾಡಿಕೊಳ್ಳಬಹುದು

ಕೊರೊನಾ ತಲ್ಲಣ

## ಕೋವಿಡ್: ಮತ್ತೆ 2,220 ಮಂದಿಗೆ ಸೋಂಕು

ನಗರದಲ್ಲಿ ಮತ್ತೆ 2,220 ಮಂದಿ ಕೊರೊನಾ ಸೋಂಕಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ. ಇದರಿಂದಾಗಿ ಒಟ್ಟು ಸೋಂಕಿತರ ಸಂಖ್ಯೆ 55 ಸಾವಿರ ದಾಟಿದೆ.


ಸೋಂಕಿತರಲ್ಲಿ ಮತ್ತೆ 20 ಮಂದಿ ಮೃತಪಟ್ಟಿದ್ದು, ಕೋವಿಡ್‌ನಿಂದ ಸಾವಿಗೀಡಾದವರ ಸಂಖ್ಯೆ 1029ಕ್ಕೆ ಏರಿಕೆಯಾಗಿದೆ. 8 ವರ್ಷದ ಬಾಲಕಿಯೊಬ್ಬಳು ಖಾಸಗಿ ಆಸ್ಪತ್ರೆಯಲ್ಲಿ ಮರಣ ಹೊಂದಿದ್ದಾಳೆ.

ಹೊಸದಾಗಿ ದೃಢಪಟ್ಟ ಪ್ರಕರಣಗಳಲ್ಲಿ ಪಶ್ಚಿಮ ವಲಯದಲ್ಲಿಯೇ ಅಧಿಕ ಮಂದಿ (504) ಸೋಂಕಿತರಾಗಿದ್ದಾರೆ. ದಕ್ಷಿಣ ವಲಯದಲ್ಲಿ 422, ಬೊಮ್ಮನಹಳ್ಳಿಯಲ್ಲಿ 247, ದಾಸರಹಳ್ಳಿಯಲ್ಲಿ 31, ಮಹದೇವಪುರದಲ್ಲಿ 114, ಆರ್.ಆರ್.ನಗರದಲ್ಲಿ 166, ಪೂರ್ವ ವಲಯದಲ್ಲಿ 422 ಹಾಗೂ ಯಲಹಂಕದಲ್ಲಿ 97 ಮಂದಿ ಸೋಂಕಿತರಾಗಿದ್ದಾರೆ.

ನಗರದಲ್ಲಿ 1,113 ಮಂದಿ ಗುಣಮುಖರಾಗಿ ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. ಒಟ್ಟು ಗುಣಮುಖರಾದವರ ಸಂಖ್ಯೆ 16 ಸಾವಿರಕ್ಕೆ ಏರಿಕೆಯಾಗಿದೆ. 37 ಸಾವಿರಕ್ಕೂ ಅಧಿಕ ಸೋಂಕಿತರು ಆಸ್ಪತ್ರೆಗಳು ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ. ನಗರದ ಜ್ವರ ಚಿಕಿತ್ಸಾಲಯಗಳಲ್ಲಿ (ಫಿವರ್ ಕ್ಲಿನಿಕ್) ಒಂದೇ ದಿನ 2,448 ಮಂದಿಯನ್ನು ತಪಾಸಣೆ ಮಾಡಲಾಗಿದೆ.

### ನಗರದ ಕೋವಿಡ್ ಅಂಕಿ–ಅಂಶ

**55,544** ಒಟ್ಟು ಸೋಂಕಿತರು




**ಶುಕ್ರವಾರದ ಏರಿಕೆ**

**2,220** ದೃಢಪಟ್ಟ ಪ್ರಕರಣ

**1,113** ಗುಣಮುಖ | **20** ಸಾವು

## ಚಿಕಿತ್ಸೆಗಾಗಿ ಅಲೆದು ಬಾಣಂತಿ ಸಾವು

ಸಕಾಲಕ್ಕೆ ಸಿಗದ ಚಿಕಿತ್ಸೆ, ಸಿಕ್ಕರೂ ದುಬಾರಿ ಶುಲ್ಕ, ಯಾವುದೇ ಕಾಯಿಲೆಯ ಚಿಕಿತ್ಸೆಗೂ ಅನಿವಾರ್ಯವಾಗಿರುವ ಕೋವಿಡ್ ವರದಿ...

ನಗರದಲ್ಲಿ ಕೊರೊನಾ ಇಲ್ಲದ, ಬೇರೆ ಕಾಯಿಲೆಗಳಿಂದ ಬಳಲುತ್ತಿರುವವರು ವಿವಿಧ ರೀತಿಯ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ.

ಹೆರಿಗೆಯ ನಂತರದಲ್ಲಿ ಕೊರೊನಾ ಸೋಂಕು ದೃಢಪಟ್ಟ ಮಹಿಳೆಗೆ ಸಕಾಲಕ್ಕೆ ಚಿಕಿತ್ಸೆ ಸಿಗದ ಕಾರಣ ಸಾವಿಗೀಡಾಗಿದ್ದಾರೆ. ಆರು ದಿನದ ಹಸುಗೂಸು ತಾಯಿಯನ್ನು ಕಳೆದುಕೊಂಡಿದೆ. ನಾಗರಬಾವಿ ನಿವಾಸಿ, 26ರ ವಯಸ್ಸಿನ ಮಹಿಳೆಯೊಬ್ಬರಿಗೆ ಇತ್ತೀಚೆಗಷ್ಟೇ ಹೆರಿಗೆಯಾಗಿತ್ತು. ಹೆರಿಗೆ ನಂತರ, ಅವರಿಗೆ ಸೋಂಕು ತಗುಲಿರುವುದು ದೃಢಪಟ್ಟಿತ್ತು. ಜೊತೆಗೆ ಉಸಿರಾಟದ ತೊಂದರೆಯೂ ಕಾಣಿಸಿಕೊಂಡಿತ್ತು. ಚಿಕಿತ್ಸೆ ಕೊಡಿಸಲು ಮಹಿಳೆಯ ಕುಟುಂಬ ಗುರುವಾರದಿಂದ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಿದೆ. ಯಾರೂ ದಾಖಲಿಸಿಕೊಂಡಿಲ್ಲ.

ಕೆಂಗೇರಿ ಬಳಿಯ ಬಿಜಿಎಸ್ ಆಸ್ಪತ್ರೆ, ಎಂ.ಎಸ್. ರಾಮಯ್ಯ, ಬೌರಿಂಗ್ ಆಸ್ಪತ್ರೆ ಹೀಗೆ 12 ಆಸ್ಪತ್ರೆಗಳನ್ನು ಸುತ್ತಾಡಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಕುಟುಂಬದವರು ಶಾಸಕಿ ಸೌಮ್ಯಾ ರೆಡ್ಡಿ ಅವರಿಗೆ ಕರೆ ಮಾಡಿ ಚಿಕಿತ್ಸೆ ದೊರೆಯದಿರುವ ವಿಚಾರ ತಿಳಿಸಿದ್ದಾರೆ.

ಈ ಸಂಬಂಧ ಸೌಮ್ಯಾರೆಡ್ಡಿ ಟ್ವೀಟ್ ಮಾಡಿದ್ದು, ಈ ಮನವಿಗೆ ಸ್ಪಂದಿಸಿದ ನಾರಾಯಣ ಹೃದಯಾಲಯ ಚಿಕಿತ್ಸೆ ನೀಡಲು ಮುಂದಾಗಿದೆ. ಆದರೆ, ಅಷ್ಟರಲ್ಲಾಗಲೇ ಮಹಿಳೆ, ತೀವ್ರ ಉಸಿರಾಟದ ತೊಂದರೆಯಿಂದ ಶುಕ್ರವಾರ ಬೆಳಿಗ್ಗೆ ಮೃತಪಟ್ಟರು.

### ‘ದುಡ್ಡು ಕೊಟ್ಟು ರೋಗಿಯನ್ನು ಕರೆದೊಯ್ಯಿರಿ’

‘ನನ್ನ ತಂದೆಗೆ ಕಫದ ಸಮಸ್ಯೆ ಕಾಣಿಸಿಕೊಂಡಿತ್ತು. ಜುಲೈ 1ರಂದು ನಗರದ ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲಿಸಿದೆವು. ಕೋವಿಡ್ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಿಸಲೇಬೇಕು ಎಂದರು. ತಿಂಗಳಲ್ಲಿ ನಾಲ್ಕು ಬಾರಿ ಕೋವಿಡ್ ಪರೀಕ್ಷೆ ಮಾಡಿಸಿದ್ದೇವೆ. ಪ್ರತಿ ಬಾರಿಯೂ ಕೊರೊನಾ ಪಾಸಿಟಿವ್ ವರದಿ ಬಂದಿದೆ. ಈವರೆಗೆ ಅವರು ಸಂಪೂರ್ಣವಾಗಿ ಗುಣಮುಖರಾಗಿಲ್ಲ’ ಎಂದು ಪುತ್ರಿ ಸುಮಾ ‘ಪ್ರಜಾವಾಣಿ’ಗೆ ತಿಳಿಸಿದರು.

‘ಒಂದು ತಿಂಗಳಲ್ಲಿ ₹5 ಲಕ್ಷ ಬಿಲ್ ಮಾಡಿದ್ದಾರೆ. ಈಗಾಗಲೇ ₹1.80 ಲಕ್ಷ ಪಾವತಿಸಿದ್ದೇವೆ. ಇನ್ನು ನಮ್ಮಿಂದ ಶುಲ್ಕ ಭರಿಸಲು ಆಗುವುದಿಲ್ಲ, ತಂದೆಯನ್ನು ಮನೆಗೆ ಕಳಿಸಿಕೊಡಿ ಎಂದು ಕೇಳಿದೆವು. ಪೂರ್ತಿ ಶುಲ್ಕ ಪಾವತಿಸಿದ ನಂತರವೇ ಕರೆದುಕೊಂಡು ಹೋಗಿ ಎನ್ನುತ್ತಾರೆ. ತಂದೆ ಟೈಲರ್ ಕೆಲಸ ಮಾಡುತ್ತಾರೆ. ಹಣ ಹೊಂದಿಸುವುದೇ ಸವಾಲಾಗಿದೆ’ ಎಂದು ಅವರು ಅಳಲು ತೋಡಿಕೊಂಡರು.

‘ಈ ಕುರಿತು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಅವರಿಗೆ ನೇರವಾಗಿ ಕರೆ ಮಾಡಿ ವಿಷಯ ತಿಳಿಸಿದೆ. ವೈದ್ಯರಲ್ಲಿಯೇ ಮನವಿ ಮಾಡಿಕೊಳ್ಳಲು ಹೇಳಿದರು. ಈ ಕುರಿತು ಪ್ರತಿಕ್ರಿಯೆ ಪಡೆಯಲು ಆಸ್ಪತ್ರೆಯವರಿಗೆ ಕರೆ ಮಾಡಿದರೂ, ಪ್ರತಿಕ್ರಿಯಿಸಲಿಲ್ಲ.

ಸುದ್ದಿ 2 ನಿಮಿಷ

### ‘ಜವಾಬ್ದಾರಿ ಕೊಟ್ಟರೆ, ಖಾಸಗಿ ಆಸ್ಪತ್ರೆ ವ್ಯವಸ್ಥೆ ಸರಿಪಡಿಸುತ್ತೇವೆ’

**ಬೆಂಗಳೂರು:** ‘ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡುತ್ತಿರುವ ಎಲ್ಲ ಖಾಸಗಿ ಆಸ್ಪತ್ರೆಗಳ ಉಸ್ತುವಾರಿ ಜವಾಬ್ದಾರಿಯನ್ನು ನಮಗೆ ನೀಡಿದರೆ, ವ್ಯವಸ್ಥೆ ಸರಿಪಡಿಸಲಾಗುವುದು’ ಎಂದು ಐಪಿಎಸ್ ಅಧಿಕಾರಿ ಡಿ. ರೂಪಾ ಹೇಳಿದ್ದಾರೆ.

ಶೇಷಾದ್ರಿಪುರದಲ್ಲಿರುವ ಅಪೊಲೊ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತರೊಬ್ಬರಿಂದ ಹೆಚ್ಚಿನ ಹಣ ವಸೂಲಿ ಮಾಡಿರುವ ಬಗ್ಗೆ ಸಚಿವ ಡಾ. ಸುಧಾಕರ್ ಟ್ವೀಟ್ ಮಾಡಿದ್ದಾರೆ. ‘ಆಸ್ಪತ್ರೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ತಿಳಿದು ಬಂದಿದೆ. ಅನೇಕ ಬಾರಿ ಆಸ್ಪತ್ರೆಗೆ ಎಚ್ಚರಿಕೆ ನೀಡಿದರೂ ಕೊರೊನಾ ರೋಗಿಗೆ ₹ 5 ಲಕ್ಷ ಬಿಲ್ ಮಾಡಿದ್ದಾರೆ ಎನ್ನುವ ಸುದ್ದಿ ಕೇಳಿ ಆಘಾತವಾಯಿತು' ಎಂದು ಟ್ವೀಟ್‌ನಲ್ಲಿ ಹೇಳಿದ್ದರು.

ಇದಕ್ಕೆ ಮರು ಟ್ವೀಟ್ ಮಾಡಿರುವ ಡಿ. ರೂಪಾ ‘ಐಎಎಸ್ ಅಧಿಕಾರಿ ಹರ್ಷ ಗುಪ್ತ ಹಾಗೂ ನನಗೆ ಎಲ್ಲ ಆಸ್ಪತ್ರೆಗಳ ಜವಾಬ್ದಾರಿ ಕೊಟ್ಟರೆ, ಈಗಾಗಲೇ ಕೆಲ ಆಸ್ಪತ್ರೆಗಳ ವ್ಯವಸ್ಥೆ ಸರಿಪಡಿಸಿದಂತೆ ಉಳಿದ ಆಸ್ಪತ್ರೆಗಳ ವ್ಯವಸ್ಥೆಯನ್ನೂ ಸರಿಪಡಿಸುತ್ತೇವೆ. ಆಸ್ಪತ್ರೆಗಳ ತಪ್ಪು ಕಂಡುಬಂದರೆ, ನ್ಯಾಯಾಲಯದ ಅನುಮತಿ ಪಡೆದು ವಿಪತ್ತು ನಿರ್ವಹಣಾ ಕಾಯ್ದೆ ಉಲ್ಲಂಘನೆ ಅಡಿ ಪ್ರಕರಣ ದಾಖಲಿಸುತ್ತೇವೆ’ ಎಂದಿದ್ದಾರೆ.



### ಔಷಧ ಗುಣವುಳ್ಳ ನಂದಿನಿ ಹಾಲು ಮಾರುಕಟ್ಟೆಗೆ

**ಬೆಂಗಳೂರು:** ರೋಗ ನಿರೋಧಕ ಶಕ್ತಿ ಹೆಚ್ಚಿಸಲು ನೆರವಾಗುವ ನಂದಿನಿ ಬ್ರ್ಯಾಂಡ್‌ನ ಔಷಧೀಯ ಗುಣವುಳ್ಳ ಪಾನೀಯಗಳನ್ನು ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಬಿಡುಗಡೆ ಮಾಡಿದೆ.

ಇಲ್ಲಿನ ಕೇಂದ್ರ ಕಚೇರಿಯಲ್ಲಿ ನಡೆದ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ, ಸಂಸ್ಥೆಯ ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡಿದರು.

ಅರಶಿಣ ಮಿಶ್ರಿ ಹಾಲು ಈಗಾಗಲೇ ಲಭ್ಯ ಇದೆ. ತುಳಸಿ, ಅಶ್ವಗಂಧ, ಕಾಳುಮೆಣಸು, ಲವಂಗ, ಶುಂಠಿ ಮಿಶ್ರಿತ ಹಾಲು ಹಾಗೂ ನಂದಿನಿ ಸಿರಿಧಾನ್ಯ ಸಿಹಿ ಪೊಂಗಲ್, ಖಾರ ಪೊಂಗಲ್, ಸಿರಿಧಾನ್ಯ ಪಾಯಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಹೊಸದಾಗಿ ಪ್ರವೇಶಿಸಿವೆ.

ಈ ಪಾನೀಯಗಳು ಹಾಲು ಮತ್ತು ಆಯುರ್ವೇದ ಉತ್ಪನ್ನಗಳ ಮಿಶ್ರಣದಿಂದ ಕೂಡಿವೆ. 200 ಎಂ.ಎಲ್. ಪ್ರಮಾಣದ ಈ ಪಾನೀಯದ ದರ ₹25. ಆರಂಭಿಕ ಕೊಡುಗೆಯಾಗಿ ₹20 ರಲ್ಲಿ ಮಾರುಕಟ್ಟೆಯಲ್ಲಿ ಈ ಪಾನೀಯಗಳು ಲಭ್ಯ ಇವೆ.

**ಕೆಎಂಫ್ ನೌಕರರಿಗೆ ವಿಮೆ:** ಕೊರೊನಾ ಸೋಂಕಿಗೆ ಅಂಜದೇ ಕರ್ತವ್ಯ ನಿರ್ವಹಿಸುತ್ತಿರುವ ಕೆಎಂಎಫ್ ನೌಕರರಿಗೆ ವಿಮೆ ಮಾಡಿಸಲು ನಿರ್ಧರಿಸಲಾಗಿದೆ ಎಂದು ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಆಡಳಿತ ಮಂಡಳಿ ಸಭೆಯಲ್ಲಿ ಈ ಕುರಿತು ನಿರ್ಧಾರ ತೆಗೆದುಕೊಳ್ಳಲಾಗಿದೆ. ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ದಿನನಿತ್ಯ ತಲುಪಿಸುವಲ್ಲಿ 992 ನೌಕರರು ಸಕ್ರಿಯರಾಗಿದ್ದಾರೆ. ಇವರಿಗೆ ₹3 ಲಕ್ಷದವರೆಗೆ ಸಾಮಾನ್ಯ ಆರೋಗ್ಯ ವಿಮೆ ಸೌಲಭ್ಯ ಈಗಾಗಲೇ ಇದೆ. ತಲಾ ₹5 ಲಕ್ಷದವರೆಗೆ ಕೋವಿಡ್ ಸುರಕ್ಷತಾ ವಿಮೆ ಮಾಡಿಸಲಾಗುವುದು ಎಂದು ಅವರು ಹೇಳಿದರು.

के आई ओ सी एल लिमिटेड
**KIOCL LIMITED**
(A Govt. of India Enterprise)
CIN - L13100KA1976GOI002974
II Block, Koramangala, Bengaluru - 560034.
E-mail: cs@kioclltd.com Phone: 080-25531525
KUDREMUKH

**NOTICE**

NOTICE is hereby given pursuant to Regulation 29 read with Regulation 47 of the SEBI (Listing Obligations and Disclosure Requirements) Regulations, 2015, that a Meeting of the Board of Directors of the Company is scheduled to be held on **Monday, August 10,2020** through video conference (in view of COVID-19 Pandemic) inter alia, to consider and take on record the Un-Audited Financial Results of the Company for the first quarter ended **June 30, 2020.**

The Trading Window of the Company had been closed from **July 1, 2020** and will open 48 hours after the declaration of Un-Audited Financial Results for the first quarter ended **June 30, 2020.**

Further details available on Company website at **http://www.kioclltd.in** and on the website of Stock Exchanges at **https://www.nseindia.com**, **https://www.bseindia.com** and **http://www.msei.in**.

Place: Bengaluru
Date: 31/07/2020

For KIOCL Limited
**P. K. Mishra**
Company Secretary

## ಸ್ಯಾನಿಟೈಸರ್ ಸೇವಿಸಿ 10 ಸಾವು

ಒಂದನೇ ಪುಟದಿಂದ...

‘ಕಳೆದ ಹತ್ತು ದಿನಗಳಿಂದ ಇವರೆಲ್ಲಾ ಸ್ಯಾನಿಟೈಸರ್ ಸೇವಿಸುತ್ತಿದ್ದರು ಎಂದು ಸ್ಥಳೀಯರು ಹೇಳಿದ್ದಾರೆ. ಈ ಭಾಗದಲ್ಲಿ ಮಾರಾಟವಾಗಿರುವ ಸ್ಯಾನಿಟೈಸರ್‌ಗಳನ್ನು ಪಡೆದು ಅವುಗಳನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಕೊರೊನಾ ಪ್ರಕರಣಗಳು ಅಧಿಕವಾಗಿರುವ ಕಾರಣ ಕುರಿಚೆಡುವಿನಲ್ಲಿ ಲಾಕ್‌ಡೌನ್ ಜಾರಿಗೊಳಿಸಲಾಗಿದೆ. ಹೀಗಾಗಿ ಕೆಲ ದಿನಗಳಿಂದ ಈ ಭಾಗದಲ್ಲಿ ಮದ್ಯದಂಗಡಿಗಳನ್ನು ಮುಚ್ಚಲಾಗಿದೆ. ಸ್ಯಾನಿಟೈಸರ್‌ನಲ್ಲಿ ಮದ್ಯದ ಅಂಶ ಇದೆ ಎಂಬುದನ್ನು ಅರಿತು ಈ ಭಾಗದ ಮದ್ಯವ್ಯಸನಿಗಳೆಲ್ಲಾ ಅವುಗಳನ್ನು ಸೇವಿಸಲು ಶುರುಮಾಡಿದ್ದಾರೆ’ ಎಂದು ತಿಳಿಸಿದ್ದಾರೆ.

‘ಇಬ್ಬರು ಭಿಕ್ಷುಕರು ಇಲ್ಲಿನ ದೇವಸ್ಥಾನದ ಬಳಿ ಗುರುವಾರ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಈ ಪೈಕಿ ಒಬ್ಬರು ಸ್ಥಳದಲ್ಲೇ ಸಾವಿಗೀಡಾಗಿದ್ದರು. ಮತ್ತೊಬ್ಬರು, ದಾರ್ಸಿನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಅಸುನೀಗಿದರು. ರಮಣಯ್ಯ ಎಂಬುವರು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ’ ಎಂದಿದ್ದಾರೆ.

‘ಇತರ ಏಳು ಮಂದಿ ಶುಕ್ರವಾರ ಬೆಳಿಗ್ಗೆ ಸಾವಿಗೀಡಾಗಿದ್ದಾರೆ. ಇನ್ನೂ ಕೆಲವರನ್ನು ಆಸ್ಪತ್ರೆಯಿಂದ ಕಳುಹಿಸಲಾಗಿದ್ದು ಅವರೆಲ್ಲರಿಗೂ ಮನೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ’ ಎಂದೂ ಪೊಲೀಸರು ಹೇಳಿದ್ದಾರೆ.

‘ಕುರಿಚೆಡು ಗ್ರಾಮದಲ್ಲಿ ಸ್ಯಾನಿಟೈಸರ್ ಸೇವಿಸಿ ಹತ್ತು ಮಂದಿ ಮೃತರಾಗಿರುವ ಸುದ್ದಿ ತಿಳಿದು ಆಘಾತವಾಯಿತು. ರಾಜ್ಯದಲ್ಲಿ ನಕಲಿ ಮದ್ಯ ಹಾಗೂ ಸ್ಯಾನಿಟೈಸರ್ ಸೇವಿಸಿ ಜನರು ಸಾಯುತ್ತಲೇ ಇದ್ದಾರೆ. ಹೀಗಿದ್ದರೂ ರಾಜ್ಯ ಸರ್ಕಾರವು ಮದ್ಯ ತಯಾರಕರ ಮೇಲೆ ಕ್ರಮ ಕೈಗೊಳ್ಳದೆ ಕೈಕಟ್ಟಿ ಕೂತಿದೆ’ ಎಂದು ಟಿಡಿಪಿ ಮುಖಂಡ ಹಾಗೂ ವಿರೋಧ ಪಕ್ಷದ ನಾಯಕ ಚಂದ್ರಬಾಬು ನಾಯ್ಡು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ರಾಜ್ಯ ಸರ್ಕಾರವು ಮದ್ಯದ ದರವನ್ನು ದುಪ್ಪಟ್ಟು ಮಾಡಿದೆ. ಹೀಗಾಗಿ ಜನರು ಕಳಪೆ ಹಾಗೂ ನಕಲಿ ಮದ್ಯದ ಮೊರೆ ಹೋಗಿದ್ದಾರೆ. ಇದರಿಂದಾಗಿಯೇ ಸಾವು ನೋವುಗಳು ಸಂಭವಿಸುತ್ತಿವೆ’ ಎಂದೂ ಅವರು ದೂರಿದ್ದಾರೆ.

### ‘ಕೋವಿಡ್ ರಕ್ಷಾ’ ಸಹಾಯವಾಣಿಗೆ ಚಾಲನೆ

**ಬೆಂಗಳೂರು:** ‘ಕೋವಿಡ್‌ರಕ್ಷಾ’ ಸಹಾಯವಾಣಿಗೆ ಸಂಸದ ತೇಜಸ್ವಿ ಸೂರ್ಯ ಹಾಗೂ ಕಂದಾಯ ಸಚಿವ ಆರ್. ಅಶೋಕ ಶುಕ್ರವಾರ ಚಾಲನೆ ನೀಡಿದರು.


10ಕ್ಕೂ ಹೆಚ್ಚು ನವೋದ್ಯಮಗಳ ಸಹಭಾಗಿತ್ವದಲ್ಲಿ ಬೆಂಗಳೂರು ದಕ್ಷಿಣ ಸಂಸದರ ಕಚೇರಿ ವತಿಯಿಂದ ಆರಂಭಿಸಿರುವ 08061914960 ಸಹಾಯವಾಣಿಗೆ ಕರೆ ಅಥವಾ ವಾಟ್ಸ್ ಆ್ಯಪ್ ಮಾಡುವ ಮೂಲಕ ಕೊರೊನಾ ಗುಣಲಕ್ಷಣಗಳಿಗೆ ಸಂಬಂಧಿಸಿದಂತೆ ತಜ್ಞ ವೈದ್ಯರಿಂದ ಸಮಾಲೋಚನೆ ಮೂಲಕ ಪರಿಹಾರ ಪಡೆದುಕೊಳ್ಳಬಹುದು.

ಸಾರ್ವಜನಿಕರು ಸಂದೇಶ ಕಳುಹಿಸಿದ ಗಂಟೆಯೊಳಗೆ ವೈದ್ಯರು ರೋಗಿಗೆ ಕರೆ ಮಾಡಲಿದ್ದಾರೆ.

### ಸ್ನೇಹಿತರ ವಾಟ್ಸ್‌ಆ್ಯಪ್ ನಲ್ದಾಣ



ಲಾಕ್‌ಡೌನ್ ಆದಾಗಿನಿಂದ ದೂರ ದೂರ ಇರುವ ಎಷ್ಟೋ ಸ್ನೇಹಿತ/ಸ್ನೇಹಿತೆಯರು ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ನಂಟು ಬೆಸೆದುಕೊಂಡಿದ್ದಾರೆ. ಕುಶಲೋಪರಿಯ ಜತೆಗೆ ಹಳೆಯ ನೆನಪುಗಳ ಮೆಲುಕುಹಾಕುವ ಚಾವಡಿಯೂ ಆಗಿರುವ ಇಂತಹ ಗ್ರೂಪ್‌ಗಳ ಅನುಭವ ಕಥನಗಳು ಆಸಕ್ತಿಕರ. ಅಂತಹ ಸ್ನೇಹಿತರ ಗುಂಪಿನಲ್ಲಿ ನೀವೂ ಇದ್ದರೆ ಸ್ವಾರಸ್ಯಕರವಾದ ಆ ಗುಂಪು ಹುಟ್ಟಿದ ಬಗೆ, ಎಷ್ಟು ವರ್ಷಗಳ ನಂತರ ಸ್ನೇಹಿತರ ಮರುಬೆಸುಗೆಯಾಯಿತು ಎನ್ನುವ ಅಂಶಗಳನ್ನು ಬರೆದು ಆಗಸ್ಟ್ 1ರ ಸಂಜೆ 5ರೊಳಗೆ ಕಳುಹಿಸಿ. 60 ಪದಗಳಿಗೆ ಮೀರದ ಬರವಣಿಗೆಗಳಲ್ಲಿ ಕೆಲವನ್ನು ಆಯ್ಕೆ ಮಾಡಿ, ಸ್ನೇಹಿತರ ದಿನವಾದ ಆಗಸ್ಟ್ 2ರಂದು ಪ್ರಕಟಿಸಲಾಗುವುದು. ನಿಮ್ಮ ಹೆಸರು, ಪೂರ್ಣ ವಿಳಾಸ ಬರೆಯಲು ಮರೆಯದಿರಿ.



**ವಾಟ್ಸ್ ಆ್ಯಪ್: 9606038256**

**ಟೀಂಲೀಸ್ ಸರ್ವೀಸಸ್ ಲಿಮಿಟೆಡ್**
TeamLease® Putting India to Work
CIN: L74140KA2000PLC118395
6ನೇ ಮಹಡಿ, ಬಿಎಂಟಿಸಿ ಕಮರ್ಷಿಯಲ್ ಕಾಂಪ್ಲೆಕ್ಸ್, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ – 560095, ಭಾರತ
ದೂರವಾಣಿ: 91 80 6824 3000 / ಫ್ಯಾಕ್ಸ್: 91 80 6824 3001
corporateaffairs@teamlease.com, www.teamleasegroup.com

**30ನೇ ಜೂನ್, 2020ಕ್ಕೆ ಕೊನೆಯಾದ ತ್ರೈಮಾಸಿಕಕ್ಕೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಸಾರಾಂಶ**

(ಶೇರು ತಲಾವಾರು ದತ್ತವನ್ನು ಹೊರತುಪಡಿಸಿ ಉಳಿದ ಅಂಕಿಗಳು ಲಕ್ಷ ರೂಪಾಯಿಗಳಲ್ಲಿ)

| ವಿವರಗಳು | ಏಕಿಕೃತ | | ಕ್ರೋಡೀಕೃತ | |
|---|---|---|---|---|
| | 30.06.2020ಕ್ಕೆ ಕೊನೆಯಾದ 3 ತಿಂಗಳಿಗೆ | ಕ್ರಮವಾಗಿ 30.06.2019ಕ್ಕೆ ಕೊನೆಯಾದ 3 ತಿಂಗಳಿಗೆ | 30.06.2020ಕ್ಕೆ ಕೊನೆಯಾದ 3 ತಿಂಗಳಿಗೆ | ಕ್ರಮವಾಗಿ 30.06.2019ಕ್ಕೆ ಕೊನೆಯಾದ 3 ತಿಂಗಳಿಗೆ |
| | ಅಪರಿಶೋಧಿತ | ಅಪರಿಶೋಧಿತ | ಅಪರಿಶೋಧಿತ | ಅಪರಿಶೋಧಿತ |
| ಕಾರ್ಯಾಚರಣೆಗಳಿಂದ ಒಟ್ಟು ಆದಾಯ | 1,03,431.79 | 1,15,135.56 | 1,13,644.69 | 1,25,123.20 |
| ಸದರಿ ಅವಧಿಗೆ ತೆರಿಗೆಗೆ ಮುನ್ನ ನಿವ್ವಳ ಲಾಭ / (ನಷ್ಟ)* | 1,839.81 | 1,992.89 | 1,760.74 | 1,726.81 |
| ಸದರಿ ಅವಧಿಗೆ ತೆರಿಗೆಗೆ ನಂತರ ನಿವ್ವಳ ಲಾಭ / (ನಷ್ಟ)* | 1,769.14 | 2,047.43 | 1,710.04 | 1,879.02 |
| ಸದರಿ ಅವಧಿಗೆ ಒಟ್ಟು ಸಮಗ್ರವಾದ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಸೇರಿದಂತೆ ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು)] | 1,786.75 | 2,040.59 | 1,726.70 | 1,876.13 |
| ಪೇಯ್ಡ್–ಅಪ್ ಇಕ್ವಿಟಿ ಶೇರು ಬಂಡವಾಳ (ಮುಖ ಬೆಲೆ ತಲಾ 10 ರೂ.) | 1,709.68 | 1,709.68 | 1,709.68 | 1,709.68 |
| ಮೀಸಲುಗಳು (ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು) – ಹಿಂದಿನ ಲೆಕ್ಕ ವರ್ಷದ ಬ್ಯಾಲೆನ್ಸ್ ಷೀಟ್ ಪ್ರಕಾರ | 55,169.95 | 51,183.32 | 55,499.15 | 52,201.90 |
| ತಲಾ ಶೇರಿಗೆ ಗಳಿಕೆ (ಮುಖ ಬೆಲೆ ತಲಾ 10 ರೂ.) (ವಾರ್ಷಿಕಿಕರಣಗೊಂಡಿಲ್ಲ) | | | | |
| (ಎ) ಮೂಲ (ರೂ.) | 10.35 | 11.98 | 10.00 | 10.99 |
| (ಬಿ) ಡೈಲ್ಯೂಟೆಡ್ (ರೂ.) | 10.35 | 11.98 | 10.00 | 10.99 |

* ಮೇಲೆ ವರದಿ ಮಾಡಿರುವ ಅವಧಿಗಳಿಗೆ ಯಾವುದೇ ಅಸಾಮಾನ್ಯ ಮತ್ತು ಅಸಾಧಾರಣ ಐಟಂ ಇರಲಿಲ್ಲ.

ಮೇಲಿನ ಹೇಳಿಕೆಯು ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ (“ವಿಧಾಯಕಗಳು”) ವಿಧಾಯಕ 33ರ ಅಡಿಯಲ್ಲಿ ಪ್ರಕಟವಾಗಿರುವ, ಜೂನ್ 30, 2020ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪದ ಸಾರಾಂಶವಾಗಿದೆ. ಅಪರಿಶೋಧಿತ ಏಕಿಕೃತ ಮತ್ತು ಕ್ರೋಡೀಕೃತ ಆರ್ಥಿಕ ಫಲಿತಾಂಶಗಳ ಪೂರ್ಣ ರೂಪವು ಸ್ಟಾಕ್ ಎಕ್ಸ್‌ಚೇಂಜುಗಳ ವೆಬ್‌ಸೈಟುಗಳಲ್ಲಿ BSE ವೆಬ್‌ಸೈಟ್ (www.bseindia.com) ಮತ್ತು NSE ವೆಬ್‌ಸೈಟ್ (www.nseindia.com) ಮತ್ತು ಕಂಪನಿಯ ವೆಬ್‌ಸೈಟ್ (www.teamleasegroup.com) ನಲ್ಲಿ ಲಭ್ಯವಿದೆ.

ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ವಿಧಾಯಕಗಳು, 2015ರ ವಿಧಾಯಕ 33ರ ಪ್ರಕಾರ ಕಂಪನಿಯ ಮೇಲೆ ಹೇಳಿರುವ ಜೂನ್ 30, 2020ಕ್ಕೆ ಕೊನೆಯಾದ ತ್ರೈಮಾಸಿಕದ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪತ್ರ ಪರಿಶೋಧನಾ ಸಮಿತಿಯು ವಿಮರ್ಶಿಸಿದ್ದು, ಅದರ ಶಿಫಾರಸುಗಳನ್ನು ನಿರ್ದೇಶಕ ಮಂಡಳಿಯು 2020ರ ಜುಲೈ 31ರಂದು ನಡೆದ ತನ್ನ ಸಭೆಯಲ್ಲಿ ಅನುಮೋದಿಸಿದೆ. ಸ್ವತಂತ್ರ ಲೆಕ್ಕಪರಿಶೋಧಕರಿಂದ ನೀಡಲ್ಪಟ್ಟ ಪ್ರತ್ಯೇಕಿತ ಮತ್ತು ಕ್ರೋಡೀಕೃತ ಫಲಿತಾಂಶಗಳ ಪರಿಮಿತ ಪರಿಶೀಲನಾ ವರದಿಯ ಪ್ಯಾರಾ 4 ಮತ್ತು ಪ್ಯಾರಾ 5 ಕ್ರಮವಾಗಿ, ಗಮನವನ್ನು ಸೆಳೆಯಲಾಗುತ್ತಿದ್ದು, ವರದಿಯಲ್ಲಿ ಲೆಕ್ಕ ಪರಿಶೋಧಕರು ಯಾವುದೇ ಆಡಿಟ್ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ ಶಾಸನಬದ್ಧ ಲೆಕ್ಕ ಪರಿಶೋಧಕರು ಕಂಪನಿಯ, ಮೇಲೆ ಹೇಳಿರುವ, ಜೂನ್ 30, 2020ಕ್ಕೆ ಕೊನೆಯಾದ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪರಿಶೋಧನೆ ಮಾಡಿದ್ದಾರೆ.

ಸದರಿ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಅಧಿನಿಯಮ, 2013ರ 133ನೇ ಕಲಮಿನ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ಹೊರಡಿಸಿರುವ ಸಂಬಂಧಪಟ್ಟ ನಿಯಮಾವಳಿಗಳ ಜೊತೆ ಓದಿಕೊಂಡಂತೆ ನಿಗದಿಪಡಿಸಿರುವ, ಅನ್ವಯವಾಗುವ ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್ಸ್ (IND-AS) ನಲ್ಲಿ ವಿಧಿಸಿರುವ ರೆಕಗ್ನಿಷನ್ ಮತ್ತು ಮೆಷರ್‌ಮೆಂಟ್ (ಪರಿಶೀಲನೆ ಮತ್ತು ಮಾಪನ) ತತ್ವಗಳ ಪ್ರಕಾರ ಸಿದ್ಧಪಡಿಸಲಾಗಿದೆ.

**ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ನಿರ್ದೇಶಕ ಮಂಡಳಿಗಾಗಿ, ಮತ್ತು ಅದರ ಪರವಾಗಿ**
ಸಹಿ/–
**ಅಶೋಕ್ ಕುಮಾರ್ ನೆಡುರುಮಲ್ಲಿ**
ವ್ಯವಸ್ಥಾಪಕ ನಿರ್ದೇಶಕರು
DIN: 00151814

**ದಿನಾಂಕ:** ಜುಲೈ 31, 2020
**ಸ್ಥಳ:** ಬೆಂಗಳೂರು

### ಕೆ.ಆರ್. ಮಾರುಕಟ್ಟೆ ಇನ್ನೊಂದು ತಿಂಗಳು ಬಂದ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆ.ಆರ್. ಮಾರುಕಟ್ಟೆ ಮತ್ತು ಕಲಾಸಿಪಾಳ್ಯ ಮಾರುಕಟ್ಟೆಗಳನ್ನು ಇನ್ನೂ ಒಂದು ತಿಂಗಳು ತೆರೆಯದಿರಲು ಬಿಬಿಎಂಪಿ ನಿರ್ಧರಿಸಿದೆ.

‘ಕಂಟೈನ್‌ಮೆಂಟ್ ವಲಯಗಳ ಲಾಕ್‌ಡೌನ್ ಅವಧಿಯನ್ನು ಆ.31ರವರೆಗೆ ಮುಂದುವರಿಸಲು ಕೇಂದ್ರ ಸರ್ಕಾರ ಆದೇಶಿಸಿರುವ ಕಾರಣ ಆ.31ರವರೆಗೆ ಸೀಲ್‌ಡೌನ್ ಮುಂದುವರಿಸಲಾಗುತ್ತಿದೆ’ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಈ ಮಾರುಕಟ್ಟೆಗಳು ನಾಲ್ಕು ತಿಂಗಳಿಂದಲೂ ಸೀಲ್‌ಡೌನ್ ಸ್ಥಿತಿಯಲ್ಲೇ ಇದ್ದು, ಇವುಗಳನ್ನು ನಂಬಿಕೊಂಡಿರುವ ಸಾವಿರಾರು ಜನರ ಜೀವನ ತೀವ್ರ ಸಂಕಷ್ಟಕ್ಕೆ ಸಿಲುಕಿದೆ.

‘ಸಣ್ಣ ಅಂಗಡಿಗಳಲ್ಲಿ ಒಬ್ಬರು ಅಥವಾ ಇಬ್ಬರು ಕೆಲಸಗಾರರಿದ್ದರೆ, ಕೆಲವು ಅಂಗಡಿಗಳಲ್ಲಿ 30ರಿಂದ 40 ಕೆಲಸಗಾರರಿದ್ದಾರೆ. ಸರಾಸರಿ ಐವರು ಕೆಲಸಗಾರರು ಎಂದು ಪರಿಗಣಿಸಿದರೂ 11 ಸಾವಿರ ಮಂದಿ ಇಲ್ಲಿ ಜೀವನ ಕಟ್ಟಿಕೊಂಡಿದ್ದಾರೆ’ ಎನ್ನುತ್ತಾರೆ ಕೆ.ಆರ್. ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ದಿವಾಕರ್.

ವಿಕ್ರಮ್ ಆಸ್ಪತ್ರೆಗೆ ಸೂಚನೆ ನೀಡಿದ ಅಧಿಕಾರಿಗಳ ತಂಡ

## ಕೋವಿಡ್ ಪರೀಕ್ಷೆ: ಹೆಚ್ಚುವರಿ ಶುಲ್ಕ ವಾಪಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಪರೀಕ್ಷೆಗೆ ಹೆಚ್ಚುವರಿಯಾಗಿ ಪಡೆದ ಹಣವನ್ನು ಪರೀಕ್ಷೆ ಮಾಡಿಸಿಕೊಂಡವರಿಗೆ ವಾಪಸ್ ನೀಡಬೇಕು ಎಂದು ವಿಕ್ರಮ್ ಆಸ್ಪತ್ರೆಗೆ ಅಧಿಕಾರಿಗಳ ತಂಡ ಸೂಚಿಸಿದೆ. ಇದಕ್ಕೆ ಆಸ್ಪತ್ರೆ ಕೂಡ ಸಮ್ಮತಿ ಸೂಚಿಸಿದೆ.

ನಗರದ ವಿಕ್ರಮ್ ಆಸ್ಪತ್ರೆಯಲ್ಲಿ ಕೋವಿಡ್ ಪರೀಕ್ಷೆಗೆ ಅಧಿಕ ಶುಲ್ಕ ಪಡೆಯಲಾಗುತ್ತಿದೆ ಎಂಬ ದೂರುಗಳು ಬಂದಿದ್ದರಿಂದ ಅಧಿಕಾರಿಗಳ ತಂಡ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿತು. ಐಎಎಸ್ ಅಧಿಕಾರಿ ಮೊಹಮದ್ ಮೊಹಿಸಿನ್ ಹಾಗೂ ಐಪಿಎಸ್ ಅಧಿಕಾರಿ ಪಿ.ಹರಿಶೇಖರನ್ ನೇತೃತ್ವದ ತಂಡ ಅಲ್ಲಿನ ವೈದ್ಯಾಧಿಕಾರಿಗಳಿಂದ ಈ ಬಗ್ಗೆ ಮಾಹಿತಿ ಪಡೆದುಕೊಂಡಿತು. ಸರ್ಕಾರದ ಆದೇಶಕ್ಕೆ ವಿರುದ್ಧವಾಗಿ ಅಧಿಕ ಹಣ ಪಡೆದಲ್ಲಿ ಕಟ್ಟುನಿಟ್ಟಾದ ಕ್ರಮಕೈಗೊಳ್ಳಲಾಗುವುದು ಎಂದು ಎಚ್ಚರಿಸಿ, ಹೆಚ್ಚುವರಿ ಹಣವನ್ನು ಪರೀಕ್ಷೆ ಮಾಡಿಸಿಕೊಂಡವರಿಗೆ ವಾಪಸ್ ನೀಡುವಂತೆ ಅಧಿಕಾರಿಗಳು ಸೂಚಿಸಿದರು.

‘ಕೋವಿಡ್ ಪರೀಕ್ಷೆ ದರ ಇಳಿಕೆ ಮಾಡಿದ ಬಳಿಕವೂ ಆಸ್ಪತ್ರೆಯವರು ₹5,500 ಶುಲ್ಕವನ್ನು 44 ಮಂದಿಯಿಂದ ವಸೂಲಿ ಮಾಡಿರುವುದು ಗಮನಕ್ಕೆ ಬಂದಿದೆ. ಐಸಿಎಂಆರ್ ಹಾಗೂ ರಾಜ್ಯ ಸರ್ಕಾರ ನಿಗದಿಪಡಿಸಿದಷ್ಟು ದರವನ್ನು ಮಾತ್ರ ಪಡೆದು, ಉಳಿದ ಹಣವನ್ನು ಪರೀಕ್ಷೆ ಮಾಡಿಸಿಕೊಂಡವರಿಗೆ ವಾಪಸ್ ಮಾಡುವಂತೆ ಸೂಚಿಸಿದ್ದೇವೆ. ಅದಕ್ಕೆ ಆಸ್ಪತ್ರೆಯವರು ಕೂಡ ಒಪ್ಪಿದ್ದಾರೆ’ ಎಂದು ಮೊಹಮದ್ ಮೊಹಿಸಿನ್ ತಿಳಿಸಿದರು.

**ಸರ್ಕಾರದ ಸೂಚನೆಗೆ ಬದ್ಧ:** ಈ ಬಗ್ಗೆ ಸ್ಪಷ್ಟನೆ ನೀಡಿರುವ ವಿಕ್ರಮ್ ಆಸ್ಪತ್ರೆ, ‘ಆರ್‌ಟಿಪಿಸಿಆರ್ ಪರೀಕ್ಷೆಯ ವರದಿ ಬರಲು 24ರಿಂದ 34 ಗಂಟೆಗಳು ಬೇಕಾಗುತ್ತವೆ ಎಂಬ ಕಾರಣಕ್ಕೆ ಸಿಬಿ–ನಾಟ್ ತಂತ್ರದ ಮೂಲಕ ಪರೀಕ್ಷೆ ಮಾಡಲಾಯಿತು. ಇದು ಅನುವಂಶಿಕ ಪರೀಕ್ಷಾ ವಿಧಾನವಾಗಿದ್ದು, 2 ಗಂಟೆಯಲ್ಲಿಯೇ ವರದಿ ನೀಡಲು ಸಾಧ್ಯವಾಗುತ್ತದೆ. ಪರೀಕ್ಷಾ ವಿಧಾನ ಮತ್ತು ಕಿಟ್‌ಗೆ ₹ 3,100ರ ಜತೆಗ ಸಾರಿಗೆ ಹಾಗೂ ವೈಯಕ್ತಿಕ ಸುರಕ್ಷತಾ ಸಾಧನಗಳಿಗೆ ಹೆಚ್ಚುವರಿ ಹಣ ಪಾವತಿಸಬೇಕಾಗುತ್ತದೆ. ಹೀಗಾಗಿ ಶುಲ್ಕ ಹೆಚ್ಚಳವಾಗಿದೆ. ಇನ್ನು ಮುಂದೆ ಸರ್ಕಾರ ನಿಗದಿಪಡಿಸಿದ ದರವನ್ನೇ ಪಡೆಯಲಾಗುವುದು’ ಎಂದು ತಿಳಿಸಿದೆ.

### ಕೋವಿಡ್ ಪರೀಕ್ಷೆಗೆ ₹3 ಸಾವಿರ ದರ



‘ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಪರೀಕ್ಷೆಗೆ ಸರ್ಕಾರ ಗರಿಷ್ಠ ₹3 ಸಾವಿರ ದರ ನಿಗದಿ ಮಾಡಿದೆ’ ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ತಿಳಿಸಿದ್ದಾರೆ.

‘ಪಾಲಿಕೆ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಪರೀಕ್ಷೆ ನಡೆಸಲಾಗುವುದು. ಪರೀಕ್ಷೆ ನಂತರ ಮೊಬೈಲ್ ಸಂಖ್ಯೆಗೆ ಬರುವ ಬಿ.ಯು ನಂಬರ್ ಮಾಹಿತಿಯನ್ನು ಜೋಪಾನವಾಗಿ ಇಟ್ಟುಕೊಳ್ಳಬೇಕು. ಪರೀಕ್ಷೆಗೆ ಒಳಗಾದವರು ಫಲಿತಾಂಶ ಬರುವ ತನಕ ಮನೆಯಲ್ಲೇ ಇರಬೇಕು. ತುರ್ತು ಅವಶ್ಯಕತೆ ಇದ್ದರೆ 108 ಸಂಖ್ಯೆ ಕರೆ ಮಾಡಿ ತಿಳಿಸಬೇಕು’ ಎಂದು ಹೇಳಿದ್ದಾರೆ.

‘ಬಿಬಿಎಂಪಿ ಹಾಗೂ 108 ಆಂಬುಲೆನ್ಸ್ ಮೂಲಕ ದಾಖಲಾಗುವ ಎಲ್ಲಾ ರೋಗಿಗಳ ಚಿಕಿತ್ಸಾ ವೆಚ್ಚವನ್ನು ಮಾತ್ರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಭರಿಸಲಾಗುತ್ತದೆ. ಪ್ರತೀ ಆಸ್ಪತ್ರೆಯಲ್ಲಿ ನೆರವಿಗಾಗಿ ಆರೋಗ್ಯ ಮಿತ್ರರನ್ನೂ ನೇಮಿಸಲಾಗಿದೆ’ ಎಂದಿದ್ದಾರೆ.

‘ಸ್ವಂತ ಖರ್ಚಿನಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದು. ಆದರೆ, ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ದರ ಪಡೆಯುವಂತಿಲ್ಲ. ಸಮಸ್ಯೆಗಳಿದ್ದಲ್ಲಿ 1800 425 8330 ಟೋಲ್ ಫ್ರೀ ಸಂಖ್ಯೆಗೆ ಕರೆ ಮಾಡಬಹುದು’ ಎಂದು ಮಾಹಿತಿ ನೀಡಿದ್ದಾರೆ.

### ವಸತಿ ಪ್ರದೇಶದಲ್ಲಿ ಕೋವಿಡ್ ಲ್ಯಾಬ್: ಪಿಐಎಲ್ ವಜಾ

ವಸತಿ ಬಡಾವಣೆಯಲ್ಲಿ ಇರುವ ಕೋವಿಡ್ ಪರೀಕ್ಷಾ ಪ್ರಯೋಗಾಲಯ ಅನುಮತಿ ರದ್ದುಗೊಳಿಸಲು ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

‘ವಸತಿ ಪ್ರದೇಶದಲ್ಲಿ ಪ್ರಯೋಗಾಲಯ ತೆರೆಯಬಾರದು ಎಂದು ಹೇಳಲು ಯಾವುದೇ ಶಾಸನಬದ್ಧ ನಿಬಂಧನೆಗಳು ಇಲ್ಲ’ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಹೇಳಿದೆ.

ನಾಗರಬಾವಿ ನಿವಾಸಿಗಳಾದ ಎಸ್. ಗುಂಡಪ್ಪ ಮತ್ತು ವಿ. ಶಿವಮೂರ್ತಿ ಎಂಬುವರು ಅರ್ಜಿ ಸಲ್ಲಿಸಿದ್ದರು. ‘ನಾಗರಬಾವಿಯ ಎರಡು ಮುಖ್ಯ ರಸ್ತೆಯ ಬಳಿ ಖಾಸಗಿ ಪ್ರಯೋಗಾಲಯ ತೆರೆಯಲಾಗಿದೆ. ನಿವಾಸಿಗಳಿಗೆ ಸೋಂಕು ಹರಡುವ ಸಾಧ್ಯತೆ ಇರುವ ಕಾರಣ ಪ್ರಯೋಗಾಲಯಕ್ಕೆ ನೀಡಿರುವ ಅನುಮತಿ ರದ್ದುಪಡಿಸಲು ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದು ಅವರು ಕೋರಿದ್ದರು.